to be followed for the remaining part of the excise year is under consideration of Cabinet Sub-Committee.

2. Based on the study made by the Cabinet Sub-Committee an announcement has been made in the budget speech of Hon'ble Deputy Chief Minister for the year 1997-98 that Governement would do away with the system of arrack auction from the excise year 1997-98 and a system of licencing arrack shops with drastic reduction in the number of such shops would be introduced from the coming excise year. The modalities of this new system are being worked out by the Cabinet Sub-Committee.

ಕಮಲಾಪುರ ಕ್ಷೇತ್ರದ ಓಕಳಿ ಗ್ರಾಮದಲ್ಲಿ ಕೆರೆ ನಿರ್ಮಾಣ

1744 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದ ಓಕಳಿ ಗ್ರಾಮದಲ್ಲಿ ಕೆರೆ ನಿರ್ಮಾಣ ಮಾಡಲು ಸರ್ಕಾರವು ಯೋಚಿಸಿದೆಯೇ?*

ಆ) *ಹಾಗಿದ್ದಲ್ಲಿ ಯಾವಾಗ ಕಾರ್ಯಾರಂಭ ಮಾಡಲಾಗುವುದು?*

ಇ) *ಕಮಲಾಪುರ ಕ್ಷೇತ್ರದ ಕಲಕುಟಗಿ, ಮಗಕಿ, ಗ್ರಾಮಗಳಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡುವ ಕೆಲಸ ಬಹಳ ದಿನಗಳಿಂದ ಹಾಗೆ ಉಳಿದಿದ್ದು, ಇದರ ಕಾರ್ಯಾರಂಭವನ್ನು ಯಾವಾಗ ಮಾಡಲಾಗುವುದು?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಮತ್ತು ಇ) ಈ ಮೂರು ಕಾಮಗಾರಿಗಳು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಸಾಧುವೆಂದು ಕಂಡು ಬಂದಲ್ಲಿ ಅನುದಾನದ ಲಭ್ಯತೆ ಮೇರೆಗೆ ಕೈಗೊಳ್ಳಲಾಗುವುದು.

ವಿದ್ಯುತ್ ಮಂಡಳಿಯಲ್ಲಿ ತಾಂತ್ರಿಕ ಸಿಬ್ಬಂದಿ ಕೊರತೆ

1745 - ಶ್ರೀ ಶಿವಾನಂದ ನಾಯ್ಕ್ (ಭಟ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?